ಶ್ರೀ ಎಂ.ಎಸ್. ಪಾಟೀಲ್.—ಕೋಟಿ ರೂಪಾಯಿ ನಷ್ಟ ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ೧೦ ರೂಪಾಯಿ ಲಂಚ ತೆಗೆದುಕೊಂಡಿರುವವರ ಮೇಲೆ ಕ್ರಮ ಕೈಗೊಳ್ಳುತ್ತಾರೆ. ಕೋಟಿ ರೂಪಾಯಿ ಲಾಸ್ ಮಾಡಿರತಕ್ಕ ಆಡಳಿತ ಮಂಡಳಿಯವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಯಾರಾದರೂ ೧೦ ರೂಪಾಯಿ ಲಂಚ ತೆಗೆದುಕೊಂಡ ಸರ್ಕಾರಿ ನೌಕರನ್ನು ಡಿಸ್‌ಮಿಸ್ ಮಾಡತಕ್ಕ ಕ್ರಮವನ್ನು ಸರ್ಕಾರ ಮಾಡುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಆಡಳಿತ ಮಂಡಳಿಯ ಅಧ್ಯಕ್ಷರು ಯಾರೆಂಬುದು ನನಗೆ ಗೊತ್ತಿಲ್ಲ. ಡೈರೆಕ್ಟರುಗಳು ಯಾರೆಂದಬುದು ನನಗೆ ಗೊತ್ತಿಲ್ಲ. ಯಾರನ್ನು ಮುಚ್ಚಿಡತಕ್ಕ ಅವಶ್ಯಕತೆ ನನಗಿಲ್ಲ. ಯಾರೇ ತಪ್ಪು ಮಾಡಿರಲಿ ಸೆಕ್ಷನ್ ೧೬೫ರ ಪ್ರಕಾರ ಇನ್ಸ್‌ಪೆಕ್ಷನ್ ಮಾಡಿಸಿ, ಲೋಪದೋಷಗಳು ಕಂಡುಬಂದರೆ ಸೂಕ್ತಕ್ರಮ ಕೈಗೊಳ್ಳಲು ಲೋಕಾಯುಕ್ತಕ್ಕೆ ಕಳುಹಿಸಿ ಕೊಡುತ್ತೇನೆ. ಯಾರನ್ನೂ ಮುಚ್ಚಿಡುವುದಿಲ್ಲ. ನನ್ನ ಅಪ್ಪನಾಗಿರಲೀ ನನ್ನ ತಮ್ಮನಾಗಿರಲೀ ನಾನು ಕ್ರಮ ತೆಗೆದು ಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಮಾನ್ಯ ಎಂ.ಎಸ್. ಕೃಷ್ಣನ್‌ರವರು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ ಮುಂದಕ್ಕೆ ಹಾಕಿ, ಮಂತ್ರಿಗಳು ಸಭೆಗೆ ಬಂದಾಗ ಉತ್ತರ ಕೊಡಲಿ. ಮಾನ್ಯ ಗುರುಪ್ರಸಾದರವರ ಪ್ರಶ್ನೆಯೂ ಸಹ ಬಾರದೇ ಇರತಕ್ಕ ಮಂತ್ರಿಗಳಿಗೆ ಸಂಬಂಧ ಪಟ್ಟಿರುವುದರಿಂದ ಅದನ್ನು ಸಹ ಮುಂದಕ್ಕೆ ಹಾಕಿದರೆ ಒಳ್ಳೆಯದೆಂದು ಕಾಣುತ್ತದೆ.

ಅಧ್ಯಕ್ಷರು.—ಆಯಿತು; ಯಾರು ಉತ್ತರ ಹೇಳಬೇಕೋ ಅವರೇ ಹೇಳಲಿ. ತಮ್ಮ ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ.

## ಸರಕಾರಿ ಜಮೀನುಗಳಲ್ಲಿ ಭೂ ರಹಿತ ಹರಿಜನ-ಗಿರಿಜನರು ಸಾಗುವಳಿ ಮಾಡುವ ಬಗ್ಗೆ

೧೬ (೨೫೧ ಇ) ಶ್ರೀ ಜಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸರಕಾರಿ ಜಮೀನುಗಳಲ್ಲಿ ಭೂ ರಹಿತ ಹರಿಜನ-ಗಿರಿಜನರು ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಸಾಗುವಳಿ ಚೀಟಿ ನೀಡಲು ಸರಕಾರದವರು ಯೋಚಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರವು ಆದೇಶ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧-೯-೧೯೭೭ ಮತ್ತು ಸಂಖ್ಯೆ ಆರ್‌ಡಿ ೨೭ ಎಲ್‌ಜಿಪಿ ೮೧, ದಿನಾಂಕ ೨೬-೩-೧೯೮೧ ರಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ ಹರಿಜನ-ಗಿರಿಜನ ಪರವಾಗಿ ಸಕ್ರಮೀಕರಣಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿರುತ್ತದೆ. ಇಂತಹವರು ದಿನಾಂಕ ೧೫-೮-೧೯೮೨ರ ಒಳಗೆ ಸಕ್ರಮೀಕರಣಗೊಳಿಸಲು ಅರ್ಜಿಗಳನ್ನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸಲ್ಲಿಸಲು ಸುತ್ತೋಲೆ ಸಂಖ್ಯೆ: ಆರ್‌ಡಿ ೪೯ ಎಲ್‌ಜಿಪಿ ೮೨, ದಿನಾಂಕ ೨೬-೬-೧೯೮೨ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಆದರೆ ಇನ್ನೂ ಒತ್ತುವರಿ ಪ್ರಕರಣಗಳು ನಡೆಯುತ್ತಾ ಬಂದು ಸಕ್ರಮೀಕರಣಗೊಳಿಸುವ ಪ್ರಶ್ನೆ ಉದ್ಭವಿಸಿರುವುದರಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರಲ್ಲಿನ ಅನಿಶ್ಚಿತತೆಯನ್ನು ಹೋಗಲಾಡಿಸಿ ಅರ್ಹರು ಬೇಸಾಯ ಕಸಬನ್ನು ನಿಶ್ಚಿತ ರೀತಿಯಲ್ಲಿ ನಡೆಸಿಕೊಂಡು ಹೋಗಲು ಅನುವು ಆಗುವಂತೆ ಸರ್ಕಾರವು ಭೂಕಂದಾಯ ಅಧಿನಿಯಮ, ೧೯೬೪ರ ಕಲಂ ೪೪ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಅನುಕೂಲ ಮಾಡಿಕೊಡಲು ಸರ್ಕಾರ ತೀರ್ಮಾನಿಸಿದೆ. ಈಗ ಸದರಿ ತಿದ್ದುಪಡಿಯು ಉಭಯ ಸದನಗಳ ಜಂಟೀ ಸಲಹಾ ಸಮಿತಿಯ ಪರಿಶೀಲನೆಯಲ್ಲಿದೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ಜಮೀನನ್ನು ಭೂರಹಿತ ಹರಿಜನ ಗಿರಿಜನರು ಸುಮಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರಿಗೆ

ಅದನ್ನು ಖಾಯಂ ಮಾಡಲು ಸರ್ಕಾರದವರು ೧೫-೮-೮೨ರ ವರೆಗೆ ಅರ್ಜಿ ಹಾಕಲು ಕಾಲಾವಕಾಶ ಕೊಟ್ಟಿದ್ದರು. ಆದರೆ ಸಾಕಷ್ಟು ತಿಳುವಳಿಕೆಯನ್ನು ಈ ಸಂಬಂಧವಾಗಿ ತಾಲ್ಲೂಕು ಮಟ್ಟದಲ್ಲಿ ಕಂದಾಯ ಅಧಿಕಾರಿಗಳು ಕೊಟ್ಟಿರುವುದಿಲ್ಲ. ಈ ಕಾರಣದಿಂದಾಗಿ ಹರಿಜನ ಗಿರಿಜನರಿಗೆ ಅರ್ಜಿ ಹಾಕಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ದಯವಿಟ್ಟು ೧೫-೮-೮೨ ತಾರೀಖಿನ ಕಾಲಮಿತಿಯನ್ನು ನಿಗದಿ ಮಾಡಿದ್ದೀರಿ. ಅದನ್ನು ತೆಗೆದುಹಾಕಿ ಹರಿಜನರಿಗೆ ಹೆಚ್ಚಿನ ಕಾಲಾವಕಾಶವನ್ನು ಕೊಡಬೇಕು. ಅವರು ಸಾಗುವಳಿ ಮಾಡುತ್ತಿರುವ ಜಮೀನನ್ನು ಖಾಯಂ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತೊಂದು ಕಡೆ ಹರಿಜನರು ಸಾಗುವಳಿ ಮಾಡುತ್ತಿರುವ ಜಮೀನಿನಲ್ಲಿ ಅರಣ್ಯ ಬೆಳೆಸುವ ಉದ್ದೇಶದಿಂದ ಅರಣ್ಯ ಇಲಾಖೆಯವರು ಅವರಿಂದ ಜಮೀನನ್ನು ಕಿತ್ತುಕೊಂಡು ಬೇರೆಯವರಿಗೆ ಕೊಟ್ಟಿರುವ ಪ್ರಕರಣಗಳು ಸಹ ನಡೆದಿವೆ. ಇದನ್ನು ತಡೆದು ಅವರಿಂದ ಜಮೀನು ತೆಗೆದು ಕೊಳ್ಳದಂತೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಂದಾಯ, ಕಾಮಗಾರಿ ಮಂತ್ರಿಗಳ ಪರವಾಗಿ).—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅವರ ಅಭಿಪ್ರಾಯದಂತೆ ಅವರಿಗೆ ಅನುಕೂಲ ಮಾಡಿಕೊಡಲು ಕಾನೂನು ಬದಲಾವಣೆ ಮಾಡಬೇಕೆಂದು ಈ ತಿದ್ದುಪಡಿ ಮಸೂದೆ ಉಭಯ ಸದನಗಳ ಜಂಟಿ ಸಲಹಾ ಸಮಿತಿಯ ಮುಂದಿದೆ. ಅವರ ವರದಿಯು ಇಲ್ಲಿ ಬರುತ್ತದೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ. —ಜಂಟಿ ಸಲಹಾ ಸಮಿತಿಯ ವರದಿ ಯಾವಾಗ ಬರುತ್ತದೆ ? ಇನ್ನು ಎಷ್ಟು ದಿವಸಗಳಲ್ಲಿ ಬರುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ರಿಪೋರ್ಟ್ ಬಂದ ತಕ್ಷಣ ಬರುತ್ತದೆ.

೧೭. ೫೫೧ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಅಧ್ಯಕ್ಷರು.—ಆಯಿತು. ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

೧೮. ೫೫೫ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಇದು ಪಿ.ಡಬ್ಲ್ಯೂ.ಡಿ.ಗೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಅವರಿಗೇ ಕಳಿಸಿದ್ದೇನೆ. ಆದ್ದರಿಂದ ಇದನ್ನು ಮುಂದಿನ ಸಲ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ಮುಂದೂಡಲಾಗಿದೆ.

## ಮುಷ್ಕರ, ಬೀಗಮುದ್ರೆ ಮತ್ತು ಲೇ ಆಫ್‌ಗಳ ಬಗ್ಗೆ

೧೯ (೨೪೧ ಇ) ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.) ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ಮೂರು ವರ್ಷಗಳಿಂದ ಮುಷ್ಕರ, ಬೀಗಮುದ್ರೆ ಮತ್ತು ಲೇ ಆಫ್‌ಗಳಿಂದ ಕಳೆದು ಕೊಂಡ ಮಾನವ ದಿನಗಳೆಷ್ಟು ಹಾಗೂ ಅಂಥ ಪ್ರಸಂಗಗಳು ಎಷ್ಟು ?

ಆ) ಆ ವರ್ಷಗಳಲ್ಲಿ ಮುಚ್ಚುವಿಕೆ ಮತ್ತು ರಿಟ್ರೆಂಚ್‌ಮೆಂಟ್‌ನಿಂದ ಎಷ್ಟು ಜನ ಕೆಲಸಗಾರರು ಜೀವನೋಪಾಯವನ್ನು ಕಳೆದುಕೊಂಡಿದ್ದಾರೆ ಮತ್ತು ಅಂತಹ ಪ್ರತಿ ಪ್ರಸಂಗಗಳು ಮತ್ತು ಮುಚ್ಚಿಟ್ಟಿರುವ ಕಾಲ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—